## <u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ</u>

### ದಿನಾಂಕಃ **16.01.2025**

### <u>**ಸಿ.ಸಿ.ನಂ. 264/2024**</u>

ಫಿರ್ಯಾದಿಃ- ಪಾಂಡವಪುರ ಪೊಲೀಸ್ ಠಾಣೆ

ಃ ವಿರುದ್ಧ ಃ

ಆರೋಪಿಃ- ಕಾಳೇಗೌಡ.ಜಿ.ಕೆ ಬಿನ್ ಲೇಃ ಕಾಳೇಗೌಡ,
ಸುಮಾರು 55 ವರ್ಷ,
ವಾಸಃ ಕೆ.ಆರ್.ಪೇಟೆ ತಾಃ ಮಂಡ್ಯ.

## <u>ಆರೋಪಣೆ</u>

**ಶ್ರೀಮತಿ. ಪಾರ್ವತಮ್ಮ.ಬಿ., ಬಿ.ಎ., ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

ದಿನಾಂಕಃ 24.10.2023 ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹುಲ್ಕೆರೆ ಗ್ರಾಮದ ರಾಜಣ್ಣ ನವರ ಮನೆಯ ಮುಂಭಾಗ ಮೈಸೂರು -ಕೆ.ಆರ್.ಪೇಟೆ ಹೆದ್ದಾರಿ ರಸ್ತೆಯ ಹಂಪ್ಸ್ ನ ಮೇಲೆ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-11-ಎಫ್-0105 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನ ಚಾಲಕ ಬಸ್ಸನ್ನು ಮೈಸೂರು ಕಡೆಯಿಂದ ಕೆ.ಆರ್.ಪೇಟೆ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವನ ಪ್ರಾಣಕ್ಕೆ ಹಾನಿಯನ್ನುಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಹಂಪ್ಸ್ ನ್ನು ಅದೇ ವೇಗದಲ್ಲಿ ಹತ್ತಿಸಿ ಅಪಘಾತಉಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.279 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ನಿಮ್ಮ ಬಾಬ್ತು ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಹಂಪ್ಸ್ ಅನ್ನು ವೇಗದಲ್ಲಿ ಹತ್ತಿಸಿ

ಅಪಘಾತವುಂಟು ಮಾಡಿದ ಪರಿಣಾಮ, ಬಸ್ಸು ಮೇಲಕ್ಕೆ ಜಿಗಿದಾಗ ಬಸ್ಸಿನ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದ ಚಾಸಾ-2 ಮಂಜುಳ ರವರು ಮೇಲೆ ಜಿಗಿದು ಕೆಳಗೆ ಬಿದ್ದಾಗ, ಬಸ್ಸಿನಲ್ಲಿನ ಕಂಬಿಗಳು ತಲೆಗೆ ಹಾಗೂ ಹೊಟ್ಟೆಗೆ ತಗುಲಿ ಸಾಮಾನ್ಯ ಸ್ವರೂಪದ ಗಾಯವುಂಟಾಗಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.337 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ಗಾಯಾಳುವಿಗೆ ಪ್ರಾಥಮಿಕ ಚಿಕಿತ್ಸೆಯನ್ನು ಕೊಡಿಸದೇ, ಅಪಘಾತದ ವಿಷಯವನ್ನು ಸಂಬಂಧಪಟ್ಟ ಪೋಲೀಸ್ ಠಾಣೆಗೆ ಮಾಹಿತಿಯನ್ನು ನೀಡದೆ ಪರಾಗಿಯಾಗಿದ್ದು, ಆ ಮೂಲಕ ಮೋಟರು ವಾಹನ ಕಾಯ್ದೆ 187 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಪ್ರಶ್ನೆಃ **1** ಃ ಈಗ ನಿಮಗೆ ಓದಿ ಹೇಳಿದ ಆರೋಪದ ಸಾರಾಂಶ ತಿಳಿಯಿತೇ **?**
ಉತ್ತರಃ

ಪ್ರಶ್ನೆಃ **2**ಃ ಈಗ ನೀನು ಓದಿಸಿಕೊಂಡು ತಿಳಿದ ಆರೋಪಕ್ಕೆ ತಪ್ಪೊಪ್ಪುವೆಯೋ ಅಥವಾ ಅಧಿವಿಚಾರಣೆಯಾಗಲೀ ಎನ್ನುವೆಯೋ **?**
ಉತ್ತರಃ

**(**ಆರೋಪಿತನ ಯಥಾವತ್ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯ್ತು**.**

**(ಪಾರ್ವತಮ್ಮ.ಬಿ.)**
**ಸಿವಿಲ್ ಜೆಡ್ಜ್ ಮತ್ತು ಜೆಎಂಎಫ್‌ಸಿ**
**ಪಾಂಡವಪುರ.**

ಆರೋಪಿ ಸಹಿಃ